ಓ.ಎಸ್. ನಂ. 53/2019

ಪಿ.ಡಬ್ಲ್ಯು: 02 (Nagaraja)

ದಿನಾಂಕ: 23.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು: ಪ್ರತಿವಾದಿ ಪರ – ಶ್ರೀ JKR ವಕೀಲರಿಂದ.

ದಾವೆಯನ್ನು ವಾದಿ ಹೂಡಿರುತ್ತಾರೆ. ವಾದಿಯ ಹೊಲ ಹಾಗೂ ನಮ್ಮ ಹೊಲ ಪಕ್ಕದಲ್ಲಿವೆ. ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ, ವಾದಿ ನೀಡಿರುವುದಿಲ್ಲ. ವಾದಿ ದಾವೆಯನ್ನು ಪಕ್ಕದ ಹೊಲದವರ ವಿರುದ್ಧ ಸಲ್ಲಿಸಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ದಾವೆಯನ್ನು ವಾದಿಯ ಹೊಲಕ್ಕಾಗಿ ಸಲ್ಲಿಸಿರುತ್ತಾರೆ. ವಾದಿಯ ಹೊಲದ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನಮ್ಮ ಹೊಲದ ನಂತರ ಅವರ ಹೊಲ ಇದೆ. ವಾದಿಯ ಜಮೀನು 4.40 ಎಕರೆ ಇದೆ. ವಾದಿಗೆ ಸದರಿ ಜಮೀನು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಅವರು ಉಳುಮೆ ಮಾಡುತ್ತಿರುವುದನ್ನು ನಾನು ನೋಡಿರುತ್ತೇನೆ. ಅದನ್ನು ಖರೀದಿ ಮಾಡಿರುತ್ತಾರೋ ಅಥವಾ ಪಿತ್ರಾರ್ಜಿತ ಆಸ್ತಿಯೋ ನನಗೆ ಗೊತ್ತಿಲ್ಲ. ನಮ್ಮ ಹೊಲ ದಾವಾ ಆಸ್ತಿಯ ಪಶ್ಚಿಮಕ್ಕೆ ಬರುತ್ತದೆ. ನಮ್ಮ ಹೊಲ ನಮ್ಮ ತಾಯಿ ಸಾಕಮ್ಮಳ ಹೆಸರಿಗೆ ಇದೆ. ಸಾಕ್ಷಿ ಮುಂದುವರೆದು ನಮ್ಮ ಜಮೀನು ಬಿಟ್ಟು ಒಂದು ಜಮೀನಿನ ನಂತರ ವಾದಿಯ ಜಮೀನು ಇದೆ. ಸರ್ವೆ ನಂಬರ್ 428 ಎ/2 ಒಟ್ಟು ವಿಸ್ತೀರ್ಣ 7.06 ಸೆಂಟ್ಸ ಎಂದರೆ ಇರಬಹುದು. ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ.

ವಾದಿಗಳಿಗೆ ಸಹಾಯ ಮಾಡುವ ಸಲುವಾಗಿ ನಾನು ಯಾವುದೇ ದಾಖಲಾತಿಗಳನ್ನು ನೋಡದೇ ಇದ್ದರು ಸಹ ವಾದಿಗಳೇ ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಿದ್ದೇನೆ ಎಂದರೆ ನಾನು ಉಳುಮೆ ಮಾಡುವುದನ್ನು ನೋಡಿದ್ದೇನೆ. ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ನೋಡದೇ ಇರುವ ಕಾರಣ ಹಾಗೂ ವಾದಿಗಳಿಗೆ ಆಸ್ತಿ ಹೇಗೆ ಬಂದಿದೆ ಎಂದು ನನಗೆ ಗೊತ್ತಿಲ್ಲದೆ ಇದ್ದ ಕಾರಣ ದಾವಾ ಆಸ್ತಿಯ ಮಾಲೀಕರು ಯಾರು ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ವಾದಿ ಉಳುಮೆ ಮಾಡುವುದನ್ನು ನಾನು ನೋಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯ ಮಾಲೀಕರು ಯಾರೆಂದು ಬರೆಸಿಲ್ಲ ಎಂದರೆ ಅವರೇ ಉಳುಮೆ ಮಾಡುತ್ತಿರುವ ಕಾರಣ ಅವರೇ ಮಾಲೀಕರು ಎಂದು ಬರೆಸಿರುತ್ತೇನೆ. ದಾವಾ ಆಸ್ತಿ ಪ್ರತಿವಾದಿಗಳ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಆದ ಕಾರಣ ವಾದಿಗಳಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಹಾಗೂ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.